ವಿಷಯ:ರಾಜ್ಯದ ಬೃಹತ್ ಕೈಗಾರಿಕೆಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1364 (2019)

ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟ ರಾಜ್ಯದಲ್ಲಿರುವ ಬೃಹತ್ ಕೈಗಾರಿಕೆಗಳ ಸಂಖ್ಯೆ ಎಷ್ಟು ;

ಆ) ಈ ಉದ್ದಿಮೆಗಳಿಂದ ಪ್ರತಿ ವರ್ಷ ಎಷ್ಟು ಮೌಲ್ಯದ ಸರಕುಗಳನ್ನು ಉತ್ಪಾದಿಸಲಾಗುತ್ತಿದೆ ;

ಇ) ಈ ಕೈಗಾರಿಕೆಗಳಲ್ಲಿ ದುಡಿಯುವ ಒಟ್ಟು ಕಾರ್ಮಿಕ ಸಂಖ್ಯೆ ಎಷ್ಟು ?

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) 678 ಮಧ್ಯಮ ಮತ್ತು ಬೃಹತ್ ಕೈಗಾರಿಕೆಗಳು.

ಆ) ರೂ. 6,05,190-00ಲಕ್ಷಗಳು.

ಇ) ಒಟ್ಟು 2,70,211 ಜನ.

ವಿಷಯ: ಕೈಗಾರಿಕಾ ಜೋರ್ಡ್ನವರು ಸ್ವಾಧೀನ ಪಡಿಸಿಕೊಂಡ ನಂತರ ರೈತ ಮಕ್ಕಳಿಗೆ ಉದ್ಯೋಗ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1365 (2020)

ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಭೂ ಸ್ವಾಧೀನಪಡಿಸಿಕೊಳ್ಳಲು ರೈತರಿಗೆ ಪ್ರತಿ ಎಕರೆಗೆ ಕೊಡುವ ಅಂದಾಜು ಬೆಲೆ ಏನು ;

ಆ) ಭೂಸ್ವಾಧೀನದ ನಂತರ ರೈತರಿಗೆ ಆ ಸ್ಥಳದಲ್ಲಿ ಸ್ಥಾಪಿತವಾದ ಕೈಗಾರಿಕೆಗಳಲ್ಲಿ ಆದ್ಯತೆಯ ಮೇಲೆ ಉದ್ಯೋಗವನ್ನು ನೀಡಲಾಗುತ್ತಿದೆಯೇ ?

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಭೂ ಸ್ವಾಧೀನಪಡಿಸಿಕೊಳ್ಳಲು ಭೂಮಿಗಳಿಗೆ ಪ್ರತಿಯೊಂದು ಭೂಮಿಗೂ ಭೂಮಿಯ ಗುಣಮಟ್ಟ, ಭೂಮಿಯು ಅಭಿವೃದ್ಧಿ ಹೊಂದಿರುವುದು ಮತ್ತು ಭೂಮಿಯ ಸ್ವರೂಪ, ಸುತ್ತಮುತ್ತಲಿನ ಭೂಮಿಗಳ ಮಾರಾಟ, ಈ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಭೂ ಸ್ವಾಧೀನ ಕಾಯ್ದೆಯನ್ವಯ ಪರಿಹಾರಧನವನ್ನು ನಿಗಧಿ ಪಡಿಸಲಾಗುವುದು. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಇಲ್ಲಿಯವರೆಗೆ ಕನಿಷ್ಠ ಸುಮಾರು ರೂ. 5,000-00ಗಳಿಂದ ಗರಿಷ್ಠ 1.00ಲಕ್ಷದವರೆಗೆ ಪ್ರತಿಯೊಂದು ಎಕರೆಗೆ ಪರಿಹಾರಧನವನ್ನು ಆಯಾಯ ಭೂಮಿಗಳ ಅನುಸಾರವಾಗಿ ಪರಿಹಾರಧನವನ್ನು ಕೊಡಲಾಗಿದೆ.

ಆ) ಭೂಸ್ವಾಧೀನ ಕ್ರಮದಿಂದ ಭೂಮಿಯನ್ನು ಕಳೆದುಕೊಂಡ ರೈತರಿಗೆ ಮತ್ತು ಅವರ ಕುಟುಂಬದ ಸದಸ್ಯರಿಗೆ ಅವರ ವಿದ್ಯಾರ್ಹತೆ ಮತ್ತು ಸೂಕ್ತತೆಗನುಗುಣವಾಗಿ ಆದ್ಯತೆ ಮೇರೆಗೆ ಉದ್ಯೋಗವನ್ನು ನೀಡಬೇಕೆಂಬ ಷರತ್ತನ್ನು ಉದ್ಯಮಿಗಳೊಡನೆ ನೆರವೇರಿಸುವ ಗುತ್ತಿಗೆ ಮತ್ತು ಕರಾರು ಪತ್ರದಲ್ಲಿ ಅಳವಡಿಸಲಾಗುತ್ತದೆ.

ಇಂತಹ ರೈತರು ಅಥವಾ ಅವರ ಅವಲಂಬಿತರಿಂದ ಬಂದ ಅರ್ಜಿಗಳನ್ನು ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ತತ್ಸಂಬಂಧ ಕೈಗಾರಿಕೆಗೆ ಕಳುಹಿಸಿ ಸೂಕ್ತ ನಿರ್ದೇಶನವನ್ನೂ ಸಹ ನೀಡಲಾಗುವುದು.

ವಿಷಯ: ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ರೈತರಿಂದ ಭೂಸ್ವಾಧೀನ ಮಾಡಿಕೊಳ್ಳುವ ಬೆಲೆಯ ಬಗ್ಗೆ.